ಒತ್ತಾಯಕ್ಕೆ ಗಿರಿ ಮಠದಲ್ಲೇ ಉಳಿದ. ಮಧ್ಯಾಹ್ನ ಅಲ್ಲೇ ಒಳ್ಳೆಯ ಊಟವೂ ಸಿಕ್ಕಿತು. ಮಾವಿನ ಮಿಡಿ ಉಪ್ಪಿನಕಾಯಿಯನ್ನು ಚಪ್ಪರಿಸಿದ. ಒಂದು ಸಣ್ಣ ಭರಣಿಯಲ್ಲಿ ಉಪ್ಪಿನಕಾಯಿ ಹಾಕಿ ಆತನ ತಾಯಿಗೆ ಕೊಡಲು ಕೊಟ್ಟರು. ಊಟದ ನಂತರ ಗಿರಿಯನ್ನು ಆರಾಮವಾಗಿ ಇರಲು ಬಿಟ್ಟರು. ಆಗ ಆತ ಮಠದ ಮುಂದಿನ ಮುಖಮಂಟಪದಲ್ಲಿ ಇದ್ದ ಮರದ ಕೆತ್ತನೆಯ ತೂಗುಮಂಚದಲ್ಲಿ ಕುಳಿತುಕೊಂಡ. ತೂಗಾಡಿದ. ಆಗಲೇ ಆ ಹೆಣ್ಣಿನ ವಿಷಯವಾಗಿ ಆಲೋಚನೆಯ ಆಳದಲ್ಲಿ ಹೂತುಹೋದ.

ಅದೇ ಸಮಯ!, ಗಿರಿ ಕಾವಿ ಬಣ್ಣದ ನೆಲದಲ್ಲಿ ಒಂದು ಯುವತಿಯ ದಪ್ಪದಪ್ಪ ಗೆಜ್ಜೆಗಳನ್ನು ಕಟ್ಟಿದ ಎರಡು ಪಾದಗಳನ್ನು ಸ್ಪಷ್ಟವಾಗಿ ನೋಡಿದ. ಆತನ ಎದೆ ಒಮ್ಮೆಗೇ ಧಸಕ್ಕೆಂದಿತು. ಆತ ಸರಿ ನೋಡಬೇಕೆನ್ನುವಷ್ಟರಲ್ಲಿ 'ಗಿಜಿಗಿಜಿ ಜಿಗಿಜಿಗಿ' ಧ್ವನಿಸುತ್ತಾ, ಪಾದಗಳು ಮಠದ ಬಲದಿಕ್ಕಿನ ಕೊಳದ ಅಂಚಿನಾಚೆ ಸರಿದವು. ಆ ಹೆಣ್ಣು ಮನೆಯ ಒಳಗೆ ಎಲ್ಲೋ ಅವಿತುಕೊಂಡಿರಬಹುದೆಂಬ ಶಂಕೆ ಬಲವಾಗಲು ಗಿರಿ ಕೊಳದ ಅಂಚಿನಲ್ಲಿ ಹಿಂಬಾಲಿಸಿದ. ಗಿರಿ ಸುಸ್ತಾಗುವಷ್ಟು ಹುಡುಕಾಡಿದ. ಆ ಹೆಣ್ಣು ಎಲ್ಲೂ ಕಾಣಿಸಲಿಲ್ಲ. ಗಿರಿಗೆ ನಿರಾಶೆ ಕವಿಯಿತು. ಆ ಗೆಜ್ಜೆಗಳನ್ನು ಕಟ್ಟಿದ ಪಾದಗಳ ಹೆಜ್ಜೆಗಳು ಯಾವ ಹೆಣ್ಣಿನದ್ದು? ಭ್ರಮೆಯೇ? ಇಲ್ಲ! ಏಕೆಂದರೆ, ಗೆಜ್ಜೆಯ ಪಾದಗಳು ಕಾವಿ ಬಣ್ಣದ ನೆಲದ ಮೇಲೆ ಸ್ಪಷ್ಟವಾಗಿ ಮೂಡಿದ್ದನ್ನು ನೋಡಿದ್ದಾನೆ. ಇದೊಂದು ಚಮತ್ಕಾರವೆಂದು ಈಗ ಗಿರಿಗೆ ಅನಿಸಿತು. ಆ ಹೆಣ್ಣಿಗೆ ತಾನು ಮಠಕ್ಕೆ ಬಂದಿರುವ ಪೂರ್ವ ಸೂಚನೆ ಸಿಕ್ಕಿರಬೇಕು. ಆಕೆಯ ತೀಕ್ಷ್ಣವಾದ ನೋಟವನ್ನು ಯಾವಾಗ ಒಮ್ಮೆ ನೋಡಿದನೋ ಆ ದಿನಗಳಿಂದ ನೋಟದ ಹರಿತವಾದ ಮೊನಚು ಗಿರಿಯ ಮನಸ್ಸಿಗೆ ಗಾಯವನ್ನುಂಟುಮಾಡಿತ್ತು!

**ಕತೆಯ ನಡುವೆ...**

ಹೊರಗೆ ಬೆಳಕಿತ್ತು. ಆಗ ತಾನೆ ಗಿರಿಗೆ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಿತ್ತು. ಮೊದಲೇ ಆ ಹೆಣ್ಣಿನೊಂದಿಗೆ ಕನಸ್ಸಿನಲ್ಲೋ ಮನಸ್ಸಿನಲ್ಲೋ ಸೇರಿದ್ದರಿಂದ ಬಹುಶಃ ಆತನ ಮತ್ತು ಆಕೆಯ ಭಾವನಾಲಹರಿಗಳು ಮಿಥುನವಾಗಿರಬಹುದೆಂದು. ಆ ಹೆಣ್ಣು ಯೋಚಿಸುವುದು ಗಿರಿಗೆ ತಿಳಿಯುತ್ತಿತ್ತು. ಗಿರಿ ಯೋಚಿಸುವುದರ ಸುಳಿವು ಅನುಭೂತಿಯ ಮೂಲಕ ಆ ಹೆಣ್ಣಿಗೆ ತಿಳಿಯುವುದಿಲ್ಲವೆಂದು ಹೇಳಲು ಹೇಗೆ ತಾನೆ ಸಾಧ್ಯವಾದೀತು? ಗಿರಿ ಸ್ವಾಮಿಯ ಮಠಕ್ಕೆ ಬರುವ ಕಾರಣ ಮತ್ತು ಅವನು ಅಲ್ಲಿಗೆ ಹೋಗುವುದರ ಹಿಂದೆ ಆ ಹೆಣ್ಣಿನ ಕಾಣದ ಕೈವಾಡವಿದೆ ಎಂಬುದು ಗಿರಿಗೆ ಖಚಿತವಾಯಿತು. ಈಗ ಅಲ್ಲಿಯವರೆಗೂ ಅವನ ಮನಸ್ಸಿನಲ್ಲಿ ಭಗಭಗನೆ ಉರಿಯುತ್ತಿದ್ದುದು ಭ್ರಮೆಯಲ್ಲ ಎಂಬುದಕ್ಕೆ ಯಾವ ಸಂದೇಹವೂ ಉಳಿಯಲಿಲ್ಲ. ಗಿರಿಯ ತಾಯಿ ಸ್ವಾಮಿಗಳ ಕೈಗೆ ಅಂಥದ್ದೊಂದು ಕಾಗದ ಕೊಟ್ಟ ಪರಿಣಾಮವೂ ಆತನನ್ನು ಇಲ್ಲಿಯತನಕ ಕರೆ ತಂದಿರಬಹುದೆಂಬ ಶಂಕೆ ಬಲವಾಯಿತು. ಆ ಹೆಣ್ಣಿನ ಪ್ರೇರಣೆ ಗಿರಿಯನ್ನು ಮಠದವರೆಗೂ ಎಳೆದು ತಂದಿತೆಂಬ ವಿವೇಕವೂ ಕುಟುಕದಿರಲಿಲ್ಲ. ಮಠದ ಸ್ವಾಮಿಗಳು ಆತನನ್ನು ಕಲ್ಪನೆಯ ಜಗತ್ತಿನಲ್ಲಿ ಹೆಚ್ಚು ಸಮಯ ವಿಹರಿಸಲು ಅವಕಾಶ ಕೊಡಲಿಲ್ಲ. ಗಿರಿಯನ್ನು ತಮ್ಮ ಮಠದ ಕಡೆಗೆ ಕರೆದುಕೊಂಡು ಹೋಗುವಾಗ ಅದರ ಬಗ್ಗೆಯೇ ಮಾತನಾಡುತ್ತಾ ಹೋಗುತ್ತಿದ್ದರು. ಆತನಿಗೆ ಆ ಹೆಣ್ಣಿನ ಬಗ್ಗೆ ಯೋಚಿಸಲು ಹೆಚ್ಚು ಸಮಯವನ್ನೇ ಕೊಡಲಿಲ್ಲ. ಸ್ವಾಮಿಗಳ ಮಠ ಪುರಾತನವಾದ್ದು. ಕಾಲಕಾಲಕ್ಕೆ ಸುಣ್ಣಬಣ್ಣ ಕೊಡುತ್ತಾ ಬಂದಿರುವುದರಿಂದ ಮಠದ ಶಿಥಿಲತೆ ಹೆಚ್ಚು ಕಣ್ಣಿಗೆ ರಾಚುತ್ತಿರಲಿಲ್ಲ. ಗಿರಿ ಆ ಮಠದ ಬಗ್ಗೆ ತಿಳಿದುಕೊಳ್ಳುವ ಆಸಕ್ತಿಯಲ್ಲಿರುವಾಗಲೇ ಕೆಲವು ಕೆಲಸದವರು ಆಗಮಿಸಿದರು. ಮನೆ ಕೆಲಸದವರು, ತೋಟದ ಕೆಲಸದವರು, ಇನ್ನು ಅದು ಇದು ಅಂತ ಕೆಲವರಿದ್ದರು. ಅವನ ಮನದ ಪಲ್ಲಂಗದಲ್ಲಿ ಅಂಗಾತ ಮಲಗಿದ್ದ ಆ 'ಹೆಣ್ಣು' ಮಾತ್ರ ಕಣ್ಣಿಗೆ ಬೀಳಲಿಲ್ಲ!

ಒಬ್ಬಳು ಒಂದು ಕಪ್ ಬಿಸಿ ಬಿಸಿ ಬೆಲ್ಲದ ಕಾಫಿ ತಂದುಕೊಟ್ಟಳು. ಗಿರಿ ಮೆಲ್ಲನೆ ಹೀರಿದ. ಆತ ತುಟಿ ಚಪ್ಪರಿಸಿದ. ಅನಂತರ ಹಾಗೇ ಬೆತ್ತದ ಕುರ್ಚಿಯಲ್ಲಿ ಕುಳಿತು ಒರಗಿದ. ಅಷ್ಟೇ, ಗಾಢವಾದ ನಿದ್ದೆಗೆ ಜಾರಿದ್ದ. ಎಚ್ಚರವಾದಾಗ ಅವರ ಮನೆಯ ಮಂಚದಲ್ಲಿದ್ದ! ಆತನ ಒಂದು ಕೈ ಶರೀರದ ಮೇಲಿದ್ದ ರೇಷ್ಮೆಯಂತಹ ಬಟ್ಟೆಯಿಂದ ಹೊರಗೆ ಚಾಚಿತ್ತು. ಆ ಕೈಯಲ್ಲಿ ಒಂದು ಬಾಳೆಯ ಕೊಡಿ ಎಲೆಯಲ್ಲಿ ಪ್ರಸಾದವಿತ್ತು. ಆಗ ತಾನೇ ಕೈಯಲ್ಲಿ ತಂದಿಟ್ಟಂತಿತ್ತು. ಗಿರಿಯ ತಾಯಿ ಮನೆಯನ್ನು ಗುಡಿಸುವುದರಲ್ಲಿ ನಿರತಳಾಗಿದ್ದಳು. ಗಿರಿ ಕಣ್ಣುಗಳನ್ನು ತೆರೆದುದನ್ನು ಕಂಡು ಆತನ ತಾಯಿ ಸಂತೋಷದಿಂದ ಕಿರುಚಿದಳು. ಆತ ಮಂಚದಿಂದ ಏಳುವ ಪ್ರಯತ್ನ ಮಾಡಿದ. ಆದರೆ ದುರ್ಬಲನಾಗಿದ್ದ ಏಳುವುದು ಸಾಧ್ಯವಾಗಲಿಲ್ಲ. ನಿಶ್ಶಕ್ತಿ ಎಷ್ಟು ಅಧಿಕವಾಗಿತ್ತೆಂದರೆ ಅವನ ಬಾಯಿಂದ ಯಾವ ಶಬ್ದವೂ ಹೊರಡುತ್ತಿರಲಿಲ್ಲ. ಆತನಿಗೆ ಎರಡು ದಿನವಿಡೀ ತಾನು ದುರ್ಬಲ ಸ್ಥಿತಿಯಲ್ಲಿ ಮಂಚದ ಮೇಲೆ ಮಲಗಿದ್ದುದು ತಿಳಿಯಿತು. ಈ ಎರಡು ದಿನಗಳಲ್ಲಿ ಗಿರಿಯ ಉಸಿರು ನಿಂತು ಹೋದಂತಾಗಿತ್ತು. ತಾಯಿ ಮಗ ಇನ್ನು ಬದುಕುವುದಿಲ್ಲವೆಂದೇ ಭಾವಿಸಿದ್ದಳು. ಎರಡು ದಿನಗಳವರೆಗೆ ಆತನಿಗೆ ಸ್ಮೃತಿ ಇರಲಿಲ್ಲ. ಆ ದಿನಗಳಲ್ಲಿ ಆತನ ಉಸಿರು ಅವನ ಶರೀರದಲ್ಲಿತ್ತೋ ಇಲ್ಲವೋ ಅದನ್ನು ಆತನ ತಾಯಿ ನಿಶ್ಚಯವಾಗಿ ಹೇಳಲಾರಳು. ಗಿರಿಯನ್ನು ಕಾರಿನಲ್ಲಿ ಕರೆದು ಕೊಂಡು ಹೋಗಿದ್ದ ಸ್ವಾಮಿಯವರೇ ಆತನನ್ನು ಅಚೇತನಾವಸ್ಥೆಯಲ್ಲಿ ಇಲ್ಲಿಗೆ ಕರೆತಂದು ಬಿಟ್ಟದ್ದೆಂದು ಆಮೇಲೆ ತಾಯಿಯಿಂದ ತಿಳಿಯಿತು.

***

ಅಂದು ಗಿರಿಗೆ ಅಚ್ಚರಿ ಕಾದಿತ್ತು. ಆ ದಿನ ಸ್ವಾಮಿಗಳು ಬಂದು ಅವನ ಸುಪ್ತ ಚೇತನವನ್ನು ಹೋಗಲಾಡಿಸಿದರು. ಆತನಿಗೆ ಆ ಹೆಣ್ಣಿನ ರಹಸ್ಯದ ಬಗ್ಗೆ ಹೊಸ ತಿಳಿವಳಿಕೆ ಕೊಟ್ಟರು. ಸ್ವಾಮಿಗಳು ಸಾಕಷ್ಟು ಹೊತ್ತು ಸುತ್ತು ಬಳಸಿ ಮಾತನಾಡಿದ ನಂತರ ಆಕಸ್ಮಿಕ ವಜ್ರಾಘಾತವನ್ನು ಮಾಡುತ್ತಾ ಹೇಳಿದರು:

'ಗಿರಿ, ನಿನಗೆ ವಾಸ್ತವ ಏನೆಂದು ತಿಳಿದಿದೆಯೋ ಇಲ್ಲವೋ ನಾನರಿಯೆ. ಆ ಹೆಣ್ಣು ಬೇರೆ ಯಾರೂ ಅಲ್ಲ. ಆಕೆ ನನ್ನ ಅಣ್ಣನ ಮಗಳು. ಆದರೆ... ಈಗ ಅವಳು ಬದುಕಿಲ್ಲ. ಅವಳು ಬದುಕಿರುವಾಗ ಈ ಮಠದಲ್ಲಿ ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು ಓಡಾಡುತ್ತಿದ್ದಳು. ಒಂದು ದಿನ ನಾನು ಇಲ್ಲದ ಸಮಯದಲ್ಲಿ ಅವಳು ಕೊಳದಲ್ಲಿ ಈಜು ಕಲಿಯಲೆಂದು ಇಳಿದವಳು ಅಲ್ಲೇ ಉಸಿರುಗಟ್ಟಿ ಸಾವನ್ನಪ್ಪಿದಳು. ಅದೇ ದುಃಖದಲ್ಲಿ ಅವಳ ಅಪ್ಪನೂ ಹಾಸಿಗೆ ಹಿಡಿದು ಇಹಲೋಕ ತ್ಯಜಿಸಿದ. ಆದರೆ ಈಗಲೂ ನನ್ನ ಅಣ್ಣನ ಮಗಳನ್ನು ಕೆಲವರು ನೋಡುತ್ತಿರುವುದಾಗಿ ಹೇಳುತ್ತಿದ್ದಾರೆ. ಆದರೆ ಅವಳು ನಿಜವಾಗಿ ಬದುಕಿಲ್ಲ. ಅವಳ ಆತ್ಮ ಈ ಮಠದಲ್ಲೆಲ್ಲಾ ಸಂಚರಿಸುತ್ತಿರುತ್ತದೆ. ನಾನೂ ತುಂಬಾ ಸಲ ಅವಳನ್ನು ನೋಡಿದ್ದೇನೆ...'

ಆ ಹೆಣ್ಣಿನ ಬಗ್ಗೆ ಹೇಳುತ್ತಾ ಸ್ವಾಮಿಗಳ ಕಣ್ಣುಗಳು ಪದೇ ಪದೇ ಗಿರಿಯ ಕಣ್ಣುಗಳಲ್ಲೇ ನೆಟ್ಟಿದ್ದವು. ಆತನಿಗೂ ಆ ಹೆಣ್ಣಿಗೂ ಏನು ಸಂಬಂಧವೆಂದು ಬಹುಶಃ ಆ ಕಣ್ಣುಗಳು ತಿಳಿಯ ಬಯಸಿದ್ದವು. ಗಿರಿ ನಿರ್ವಿಕಾರನಾಗಿದ್ದ. ಸ್ವಾಮಿಗೆ ಆತನ ಮತ್ತು ಆ ಹೆಣ್ಣಿನ ರಹಸ್ಯ ಮಾನಸಿಕ ಸಂಬಂಧದ ಬಗ್ಗೆ ಸ್ವಾಮಿಗೆ ಗೊತ್ತಿತ್ತೆನಿಸುತ್ತದೆ. ಹೋಗುವಾಗ ಅವರು ಗಿರಿಗೆ ಉಪದೇಶವೀಯಲು ಮರೆಯಲಿಲ್ಲ:

'ಗಿರಿ, ನಿನಗೆ ಈ ಎಚ್ಚರಿಕೆಯನ್ನು ಕೊಡುವುದು ನನ್ನ ಕರ್ತವ್ಯವೆಂದು ತಿಳಿಯುತ್ತೇನೆ. ಈಗ ಆಪತ್ತಿನಿಂದ ಪಾರಾದರೂ ಇನ್ನೂ ಭಯಾನಕವಾದ ಆಪತ್ತುಗಳು ಎದುರಾಗುವುದಿಲ್ಲವೆಂದು ಹೇಳದಿರಲಾರೆ. ಅದಕ್ಕೆ ಮುನ್ನ ನಾನು ನಿನ್ನನ್ನು ಕರೆದುಕೊಂಡು ಹೋಗುವೆ. ನಿನ್ನ ಕುತೂಹಲಕ್ಕಾಗಿ ನೀನು ನನ್ನ ಅಣ್ಣನ ಮಗಳ ಆ ಹೆಣ್ಣಿನ ಕತೆಯನ್ನು ಹೇಗೆ ಬೇಕಾದರೂ ಬರೆಯಬಹುದು.

ಬೇಕಾದರೆ ಒಂದು ಕಾದಂಬರಿಯನ್ನೇ ಬರೆಯಬಹುದು. ಎಲ್ಲಾ ನಾನು ನಿನಗೆ ವಿವರಿಸಿ ಹೇಳುವೆನು...' ಸ್ವಾಮಿಗಳು ಹೋದ ನಂತರವೂ, ಗಿರಿ ಮನೆಗೆ ಬಂದ ಹಲವಾರು ದಿನಗಳವರೆಗೂ ಸ್ವಾಮಿಗಳು ಆಡಿದ ಶಬ್ದಗಳು ಕಿವಿಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಅವರು ಗಿರಿಯ ಸಾಹಿತ್ಯ ಪ್ರೋತ್ಸಾಹಕರಷ್ಟೇ ಅಲ್ಲ,ಅವರು ಶುಭ ಚಿಂತಕರೂ, ಹಿತೈಷಿಗಳೂ ಆಗಿದ್ದರು. ಆತ ಆ ಹೆಣ್ಣನ್ನು ಮರೆಯಲು ಪ್ರಯತ್ನಿಸಿದ.

ವಿಶೇಷ ರೂಪವಾಗಿ ಅವಳು ಸತ್ತು ಹೋಗಿರುವುದರಿಂದ ಮತ್ತು ಅವಳ ನೆನಪಿನಲ್ಲಿ ಕನಸಿನಲ್ಲಿ ಭ್ರಮಾಲೋಕದಲ್ಲಿ ಬಿದ್ದು ಒದ್ದಾಡುವುದರಿಂದ ಏನೂ ಪ್ರಯೋಜನವಿಲ್ಲ ಎಂದೆನಿಸಿತು ಗಿರಿಗೆ ಕೊನೆಕೊನೆಗೆ. ಸ್ವಾಮಿಗಳು ಹೇಳಿದಂತೆ ಗಿರಿಯ ಮನಸ್ಸಿನಲ್ಲಿ ಆ ಹೆಣ್ಣು ಒಂದು ಸುಂದರ ಮೂರ್ತಿಯಾಗಿ, ಭ್ರಮೆಯ ಒಂದು ಕತೆಯಾಗಿ ಬೆಳೆಯುತ್ತಿದ್ದಂತೆಯೇ ಮತ್ತೆ ಭ್ರಮೆಯಲ್ಲಿ ಮುಳುಗಲಾರಂಭಿಸಿದ.

ಪ್ರತಿಕ್ರಿಯಿಸಿ: feedback@sudha.co.in

